**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ .ಎಂ. ಎಫ್. ಸಿ ನ್ಯಾಯಾಲಯ ಸಿಂದಗಿ**

ಸಿ.ಸಿ.ನಂಬರ್ : 158/2018

ಪಿ.ಡಬ್ಲ್ಯೂ : 2 ಸಿ.ಡಬ್ಲ್ಯೂ 1

| | |
|---|---|
| ಸಾಕ್ಷಿದಾರರ ಹೆಸರು | : ವಿಜಯಕುಮಾರ |
| ತಂದೆಯ ಹೆಸರು | : ಗುರಯ್ಯ ಹಿರೇಮಠ |
| ವಯಸ್ಸು | : 37 ವರ್ಷ |
| ಉದ್ಯೋಗ | : ಅಬಕಾರಿ ನೀರಿಕ್ಷಕರು ಬೆಂಗಳೂರ |
| ವಾಸಸ್ಥಳ | : ಬೆಂಗುಳೂರ |
| ಸಮಯ | : 12.10 |

ಸಾಕ್ಷಿಗೆ ಇಂದು ದಿನಾಂಕಃ 12-06-2026 ರಂದು ಪ್ರಮಾಣೀಕರಿಸಲಾಯಿತು.

**ಮುಖ್ಯವಿಚಾರಣೆಃ ಎ.ಪಿ.ಪಿ. ರವರಿಂದ**

ಸಿಂದಗಿ ಅಬಕಾರಿ ಕಛೇರಿಯಲ್ಲಿ ನಾನು ಅಕ್ಟೋಬರ್ 2016 ರಿಂದ 2018 ಫೆಬ್ರವರಿ ರವರೆಗೆ ಸಿಂದಗಿಯಲ್ಲಿ ಅಬಕಾರಿ ಉಪನಿರೀಕ್ಷಕರು ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 25-02-2017 ರಂದು ಬೆಳಿಗ್ಗೆ 6 ಗಂಟೆ ಸುಮಾರಿಗೆ ಕಛೇರಿಯಲ್ಲಿದ್ದಾಗ ಚಾ ಸಾ 3 ರಿಂದ 5 ರವರನ್ನು ಕರೆದು ಸದರಿ ದಿನದಂದು ನಾವು ಸಿಂದಗಿ, ಚಿಕ್ಕರೂಗಿ, ಚಾಂದಕವಟೆ ಮಾರ್ಗವಾಗಿ ಗಸ್ತು ಕರ್ತಾವ್ಯಕ್ಕೆ ಹೋಗುವದು ಇದೆ ಎಂದು ಹೇಳಿ ನಮ್ಮ ವಾಹನ ಕೆಎ/28/ಜಿ/315 ಹೊರಟು ಅಲ್ಲಲ್ಲಿ ರಸ್ತೆ ಗಾವಲು ನಿರ್ವಹಿಸುತ್ತಾ, ನಾವು ಚಿಕ್ಕರೂಗಿ ತಾಂಬಾ ಮಾರ್ಗವಾಗಿ ಚಿಕ್ಕರೂಗಿಯಿಂದ 200 ಮೀಟರ ಅಂತರದಲ್ಲಿ ನಾವು ರಸ್ತೆ ಗಾವಲು ಮಾಡುತ್ತಾ ನಿಂತಾಗ ಆಗ ಸಮಯ ಬೆಳಿಗ್ಗೆ

9 ಗಂಟೆ ಆಗಿತ್ತು.  ಚಿಕ್ಕರೂಗಿ ಕಡೆಯಿಂದ ಅನುಮಾನಸ್ಪದಾವಾಗಿ ಒಂದು ದ್ವಿ ಚಕ್ರ ವಾಹನ ಬರುತ್ತಿದ್ದು ಸದರಿ ವಾಹನವನ್ನು ನಾನು ಮತ್ತು ಸಿಬ್ಬಂದಿ ತಡೆದು ನಿಲ್ಲಿಸಿ ಸದರಿ ವಾಹನದ ಮುಂದುಗಡೆ ಒಂದು ಸ್ಟಾರ್ಟ ಪಾನ ಮಸಾಲ ಅಂತಾ ಬರೆದು ಒಂದು ಬಿಳಿ ಬಣ್ಣದ ಚೀಲ ಇದ್ದು ಸವಾರನನ್ನು ಚೀಲದಲ್ಲಿ ಏನು ಇರುತ್ತದೆ ಎಂದು ವಿಚಾರಿಸಲಾಗಿ ಆತನು ಏನು ಇರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

ನಂತರ ಆತನ ಮೇಲೆ ಸಂಶಯ ಬಂದು ಸ್ಥಳದಲ್ಲಿಯೇ ಸ್ಥಳೀಯರು ಲಭ್ಯವಿರದ ಕಾರಣ  ಚಾ ಸಾ 2 ಮತ್ತು 3 ರವರ ಇಲಾಖಾ ಪಂಚರಾಗಿ ಮಾಡಿಕೊಂಡು ಶೋಧನಾ ವರದಿ ತಯಾರಿಸಿಕೊಂಡು  ಸದರಿ ಚೀಲವನ್ನು ಪರಿಶೀಲಿಸಲಾಗಿ ಅದರಲ್ಲಿ 90 ಎಮ್ ಎಲ್ ಓಸಿನ ವಿಸ್ಕಿ 30 ಟೆಟ್ರಾ ಪಾಕೆಟಗಳು ಹಾಗೂ ಎಮ್ ಸಿ ವಿಸ್ಕಿ 180 ಎಮ್ ಎಲ್ 12 ಮಧ್ಯದ ಬಾಟಲಿಗಳು ಇರುವುದು ಕಂಡು ಬಂದಿರುತ್ತದೆ.  ನಂತರದಲ್ಲಿ ಸದರಿ ವ್ಯಕ್ತಿಯ ಹೆಸರನ್ನು ಕೇಳಲಾಗಿ ಆತ ತನ್ನ ಹೆಸರು ಚಂಧ್ರಾಮಪ್ಪ ತಿಪ್ಪಣ್ಣ ಪೂಜಾರಿ ಎಂದು ತಿಳಿಸಿದ್ದು, ನಂತರ  ಆತನಿಗೆ ಮಧ್ಯವನ್ನು ಸಾಗಾಟಣೆ ಮಾಡುತ್ತಿರುವ ಕುರಿತು ಪರವಾನಿಗಿಗೆ ಇದ್ದ ಬಗ್ಗೆ ಕೇಳಲಾಗಿ ಆತ ಯಾವುದೇ ಪರವಾನಿಗೆ ಇಲ್ಲ ಎಂದು ನುಡಿದಿರುತ್ತಾರೆ. ಮಧ್ಯವನ್ನು ಪಂಚರ ಸಮಕ್ಷಮ ಜಪ್ತಿ ಮಾಡಿಕೊಂಡಿರುತ್ತೇವೆ.  ರಾಸಾಯನಿಕ ಪರೀಕ್ಷೆಗಾಗಿ ಓ ಸಿ ವಿಸ್ಕಿಯಲ್ಲಿ 26 ಟೆಟ್ರಾ ಪಾಕೆಟುಗಳು ಹಾಗೂ ಎಮ್ ಸಿ ವಿಸ್ಕಿ 12 ಮಧ್ಯದ ಬಾಟಲಿಗಳನ್ನು ರಾಸಾಯನಿಕ ಪರಿಕ್ಷೇಗೆ ತೆಗೆದು ಅದಕ್ಕೆ ಚೀಟಿಗಳನ್ನು ಅಂಟಿಸಿ ಕಛೇರಿ ಶೀಲು ಮಾಡಿ ಅವುಗಳನ್ನು ಒಂದು ರಟ್ಟಿನ ಪೆಟ್ಟಿಗೆಯಲ್ಲಿ ಹಾಕಿ ಸದರಿ ಪೆಟ್ಟಿಯನ್ನು ಬಟ್ಟೆಯಲ್ಲಿ ಕಟ್ಟಿ ಪ್ಯಾಕ ಮಾಡಲಾಯಿತು.  ನಂತರ ವಾಹನವನ್ನು ನೋಡಲಾಗಿ ಅದು ಒಂದು ಹಸಿರು ಬಣ್ಣದ ಒಂದು ಟಿವಿಸ್ ಕೆಎ/ 29/ಟಿ/3553 ಅಂತಾ ಇದ್ದ ದ್ವಿ ಚಕ್ರ ವಾಹನ ಇತ್ತು.

ನಂತರ ಸದರಿ ಜಪ್ತಿ ಮಾಡಿಕೊಂಡ ಮು ಮಾ ಹಾಗೂ ಆರೋಪಿಯನ್ನು ವಶಕ್ಕೆ ಪಡೆದು  ನಂತರ ಪಂಚನಾಮೆಯನ್ನು ಬೆಳಿಗ್ಗೆ 9 ರಿಂದ 10 ಗಂಟೆವರೆಗೆ ಬರೆದು ಪಂಚರ ಸಹಿ ಪಡೆದಿರುತ್ತೇನೆ. ನಂತರ ಠಾಣೆಗೆ ಹಾಜರಾಗಿ ಸರ್ಕಾರದ ಪರವಾಗಿ ದೂರನ್ನು ನೀಡಿರುತ್ತೇನೆ. ಠಾಣಾ ಗುನ್ನಾ ನಂಬರ 155/2016-17 ಪ್ರಕರಣದ ದಾಖಲು ಮಾಡಿರುತ್ತೇನೆ.

ಪ್ರಕರಣವನ್ನು ಮುಂದಿನ ತನಿಖೆಗಾಗಿ ಚಾ ಸಾ 6 ರವರಿಗೆ ನೀಡಿರುತ್ತೇನೆ. ಸಾಕ್ಷಿಗೆ ಸ್ಥಳದಲ್ಲಿ ತಯಾರಿಸಿದ  ಸಾಕ್ಷಿ ತಾವು ಸ್ಥಳದಲ್ಲಿ ತಯಾರಿಸಿದ ಶೋಧನ ಪತ್ರವನ್ನು ನಿಪಿ 1 ಎಂದು, ಸಾಕ್ಷಿಯ ಸಹಿ ನಿಪಿ 1 ಎ ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ನಿಪಿ 2 ಎಂದು, ಸಾಕ್ಷಿಯ ಸಹಿ ನಿಪಿ 2 ಎ ಎಂದು ಗುರುತಿಸಲಾಯಿತು. ದೂರನ್ನು ನಿಪಿ 3 ಎಂದು, ಸಾಕ್ಷಿಯ ಸಹಿ ನಿಪಿ 3 ಎ ಎಂದು ಗುರುತಿಸಲಾಯಿತು. ಪ್ರ.ವ. ವರದಿ  ನಿಪಿ 4 ಎಂದು, ಸಾಕ್ಷಿಯ ಸಹಿ ನಿಪಿ 4 ಎ ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಮಾಡಿಕೊಂಡ ಮಾದರಿ ಶೀಲಿನ ಕಲನ್ನು ಪ್ರತಿಯನ್ನು ನಿಪಿ 5 ಎಂದು, ಸಾಕ್ಷಿಯ ಸಹಿ ನಿಪಿ 5 ಎ ಎಂದು ಗುರುತಿಸಲಾಯಿತು. ಸಾಕ್ಷಿ ತಾವು ಜಪ್ತಿ ಮಾಡಿಕೊಂಡ ನ್ಯಾಯಾಲಯದ ಮುಂದೆ ಇರುವ ಮು ಮಾ ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು ಮಾ 1 ಮತ್ತು 2 ಎಂದು ಗುರುತಿಸಲಾಗಿದೆ.

ದಿ 25-02-2017 ರಂದು ರಾಸಾಯನಿಕ ಪರೀಕ್ಷೆಗಾಗಿ ತೆಗೆದ ಮಾದರಿ ಮು ಮಾ ಹೊರತುಪಡಿಸಿ ಉಳಿದ ಮು ಮಾ ತಮ್ಮ ತಾಬೆಯಲ್ಲಿಟ್ಟುಕೊಳ್ಳಲು ಪತ್ರ ವ್ಯವಹಾರದ ಪ್ರತಿ ನಿಪಿ 6 ಎಂದು, ಸಾಕ್ಷಿಯ ಸಹಿ ನಿಪಿ 6 ಎ ಎಂದು ಗುರುತಿಸಲಾಯಿತು. ಸಾಕ್ಷಿಯ ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು ಆರೋಪಿ ಪರ ಶ್ರೀ ಆರ್ ಆಯ್ ಎಮ್ ವಕೀಲರಿಂದ**

ಸಾಕ್ಷಿಗೆ ಘಟನೆ ಕುರಿತು ಯಾವಾಗ ಮಾಹಿತಿ ಬಂದಿರುತ್ತದೆ ಎಂದರೆ ಸಾಕ್ಷಿ ಮಾಹಿತಿ ಬಂದಿರುವುದಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ಎಷ್ಟು ಗಂಟೆಗೆ ತಾವು ಹೊರಟಿರುತ್ತೀರಾ ಎಂದರೆ ಸಾಕ್ಷಿ ಬೆಳಿಗ್ಗೆ ಸಿಂದಗಿಯಿಂದ ಚಾಂದಕವಟೆ ನಂತರ ಚಿಕ್ಕರೂಗಿ ಮಾರ್ಗವಾಗಿ ಹೋಗಿರುತ್ತೇವೆ ಎಂದು ನುಡಿದಿರುತ್ತಾರೆ. ಗಸ್ತು ಕರ್ತವ್ಯ ಚಿಕ್ಕರೂಗಿಯಲ್ಲೆ ಮಾಡುತ್ತಿದ್ದೆವು. ಚಿಕ್ಕರೂಗಿ ಹಾಗೂ ತಾಂಬಾ ಮಧ್ಯ ಎಷ್ಟು ಅಂತರ ಎಂದರೆ ಸಾಕ್ಷಿ 10 ಕಿ ಮೀ ಎಂದು ನುಡಿದಿರುತ್ತಾರೆ. ಜಪ್ತಿ ಮಾಡಿಕೊಂಡ ಮು ಮಾ ಚಿಕ್ಕರೂಗಿ ಹಾಗೂ ತಾಂಬಾದ ಎಷ್ಟು ಅಂತರದಲ್ಲಿ ಜಪ್ತಿ ಮಾಡಿಕೊಂಡಿರುತ್ತೀರಾ ಎಂದರೆ ಸಾಕ್ಷಿ ಚಿಕ್ಕರೂಗಿಯಿಂದ 200 ಮೀಟರ ಅಂತದರಲ್ಲಿ ದಾಳಿ ಮಾಡಿರುತ್ತೇವೆ ಎಂದು ನುಡಿದಿರುತ್ತಾರೆ.

ಚಿಕ್ಕರೂಗಿಯಿಂದ ತಾಂಬಾ ರಸ್ತೆ ದೊಡ್ಡದಾಗಿದ್ದು ಸಾಕಷ್ಟು ವಾಹನಗಳು ಓಡಾಡುತ್ತವೆ ಎಂದರೆ ಸರಿ. ಪ್ರತಿ 10 ನಿಮಿಷ ವಾಹನಗಳ ಓಡಾಟ ಇರುತ್ತವೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಚಿಕ್ಕರೂಗಿಯಲ್ಲಿ ನಾವು ನಿಂತಾಗ ಬೆಳಿಗ್ಗೆ 9 ಗಂಟೆ ಆಗಿತ್ತು. ದ್ವಿ ಚಕ್ರ ವಾಹನದ ಸವಾರನ ಚಿಕ್ಕರೂಗಿ ಮಾರ್ಗವಾಗಿ ಬರುತ್ತಿದ್ದನು. ದಾಳಿಯ ಸಮಯಕ್ಕೆ ನನ್ನೊಂದಿಗೆ ಚಾ ಸಾ 2 ರಿಂದ 4 ರವರು ಇದ್ದರು. ಸದರಿಯವರು ನಮ್ಮ ಸಿಬ್ಬಂದಿಗಳು ಎಂದರೆ ಸರಿ. ದಾಳಿಯ ಸಂದರ್ಭದಲ್ಲಿ ನಮ್ಮನ್ನು ಹೊರತುಪಡಿಸಿ ಸ್ಥಳದ ಸುತ್ತಮುತ್ತಲಿನ ಜಮೀನುಗಳಲ್ಲಿ ಸಾಕಷ್ಟು ಜನರು ಇದ್ದರು ಎಂದರೆ ಸಾಕ್ಷಿ ಯಾರು ಇದ್ದಿರಲಿಲ್ಲ ಎಂದು ನುಡಿದಿರುತ್ತಾರೆ.

ನಾವು ದಾಳಿ ಮಾಡಿದ ರಸ್ತೆ ಮಾರ್ಗವಾಗಿ ಸಾಕಷ್ಟು ಜನರ ಓಡಾಟ ಇದ್ದರೂ ಸಹ ಸ್ಥಳಿಯರನ್ನು ಪಂಚರಾಗಿ ಮಾಡದೇ ನಮ್ಮ ಸಿಬ್ಬಂದಿಯವರನ್ನು

ಪಂಚರಾಗಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಮು ಮಾ ಜಪ್ತಿ ಮಾಡುವ ಕಾಲಕ್ಕೆ ಇದ್ದೀರಾ ಎಂದರೆ ಸಾಕ್ಷಿ ಇದ್ದೆ  ಎಂದು ನುಡಿದಿರುತ್ತಾರೆ. ಜಪ್ತಿ ಮಾಡಿಕೊಂಡ ಮು ಮಾ ಗಳಲ್ಲಿ ಓ ಸಿ ಚಾಯ್ಸು 30 ಟೆಟ್ರಾ ಪಾಕೆಟುಗಳಿಂದ 26 ಪಾಕೆಟಗಳನ್ನು ಹಾಗೂ ಮ್ಯಾಕಡೋವೆಲ್ 12 ಮಧ್ಯದ ಬಾಟಲಿಗಳನ್ನು ಪರೀಕ್ಷೆಗಾಗಿ ಕಳುಹಿಸಲಾಗಿದೆ.  26 ಟೆಟ್ರಾ ಪಾಕೆಟುಗಳನ್ನು ಪ್ರತ್ಯೇಕವಾಗಿ ಮಾಡಿರುತ್ತೀರಾ ಎಂದರೆ ಸಾಕ್ಷಿ 26 ಟೆಟ್ರಾ ಪಕೆಟುಗಳನ್ನು ಒಂದು ರಟ್ಟಿನ ಬಾಕ್ಸನಲ್ಲಿ ಹಾಗೂ 12 ಬಾಟಲಿಗಳನ್ನು ಒಂದು ಬಾಕ್ಸನಲ್ಲಿ ಪ್ರತ್ಯೇಕವಾಗಿ ಮಾಡಿರುತ್ತೇವೆ  ಎಂದು ನುಡಿದಿರುತ್ತಾರೆ. ಪಂಚನಾಮೆ ಕಾಲಕ್ಕೆ ಆರೋಪಿಯನ್ನು ಸ್ಥಳದಲ್ಲಿ ಕೂಡಿಸಿ ಪೋಟೊವನ್ನು ತೆಗೆದು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೀರಾ ಎಂದರೆ ಸಾಕ್ಷಿ ಪೋಟೊ ತೆಗೆದಿಲ್ಲ  ಎಂದು ನುಡಿದಿರುತ್ತಾರೆ. ಸಾಕ್ಷಿಗೆ ನ್ಯಾಯಾಲಯದ ಮುಂದೆ ಇರುವ 2 ರಟ್ಟಿನ ಬಾಕ್ಸಗಳನ್ನು ತೋರಿಸಿ ಅವೆ ಇರುತ್ತವೆ ಎಂದು ಕೇಳಲಾಗಿ ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಗೆ ಮು ಮಾ ಜಪ್ತಿ ಮಾಡಿ ಪ್ಯಾಕ್ ಮಾಡಿದ ನಂತರ ಪಂಚರ ಹಾಗೂ ತಮ್ಮ ಸಹಿ ಇರುವ ಚೀಟಿಗಳನ್ನು ಅಂಟಿಸುತ್ತಿರಾ ಅದು ಈಗ ನೋಡುತ್ತಿರುವ ಮು ಮಾ ಎಲ್ಲಿ ಇರುತ್ತದೆ ಎಂದು ಕೇಳಲಾಗಿ ಸಾಕ್ಷಿ ಬಟ್ಟೆಯ ಮೇಲೆ ಚೀಟಿ ಅಂಟಿಸಿರುತ್ತದೆ  ಎಂದು ನುಡಿದಿರುತ್ತಾರೆ. ಸಾಕ್ಷಿಗೆ  ಮು ಮಾ ಇರುವ ಒಂದು ರಟ್ಟಿನ ಬಾಕ್ಸ ದಾಳಿಯ ಕಾಲಕ್ಕೆ ಇದ್ದು ಮತ್ತೊಂದು ಬಾಕ್ಸ ಎಲ್ಲಿಂದ ತಂದಿರುತ್ತೀರಾ ಎಂದರೆ ಸಾಕ್ಷಿ ಎರಡು ಬಾಕ್ಸ ಸಹ ಸ್ಥಳದಲ್ಲಿದ್ದವು  ಎಂದು ನುಡಿದಿರುತ್ತಾರೆ. ಪಂಚನಾಮೆ ಯಾರು ಬರೆದಿರುತ್ತೀರಾ ಎಂದರೆ ಸಾಕ್ಷಿ ನಾನೇ ಬರೆದಿರುತ್ತೇನೆ. ಸದರಿ ಎರಡು ರಟ್ಟಿನ ಬಾಕ್ಸ ಇರುವ ವಿಷಯ ನಮೂದು ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ  ಎಂದು ನುಡಿದಿರುತ್ತಾರೆ. ಜಪ್ತಿ ಮಾಡಿಕೊಂಡ ಮು ಮಾ ಇದ್ದ ಸ್ಟಾರ್ರ ಮಸಾಲ ಎಂದು ಬರೆದು ಮು ಮಾ ನೊದಿಂಗೆ ನ್ಯಾಯಾಲಯಕ್ಕೆ ಹಾಜರು

ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲಾಖಾ ತಾಬೆಯಲ್ಲಿದೆ ಎಂದು ನುಡಿದಿರುತ್ತಾರೆ. ಜಪ್ತಿ ಮಾಡಿಕೊಂಡ ಮು ಮಾ ಹಾಗೂ ಆರೋಪಿ ಯಾವುದೇ ಸಂಬಂಧ ಇರುವುದಿಲ್ಲ ಆತನ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಲಾಗಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ವ
ಜೆ ಎಂ ಎಫ್ ಸಿ, ಸಿಂದಗಿ.